782 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಕೆಲವು ಪ್ರಮುಖ ರಸ್ತೆಗಳನ್ನು ಪ್ಯಾಕೇಜ್ ಯೋಜನೆಯಡಿಯಲ್ಲಿ ಸುಮಾರು (10 ಸಾವಿರ ಕಿಮೀ) ರಸ್ತೆ ಅಭಿವೃದ್ಧಿಪಡಿಸಲು ಸರ್ಕಾರವು ಕ್ರಮ ಕೈಗೊಂಡಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಯಾವ ಯಾವ ಪ್ಯಾಕೇಜ್‌ಗಳು ಕಾರ್ಯಾರಂಭವಾಗುವ ಹಂತಕ್ಕೆ ತಲುಪಿವೆ;

ಇ) ಹಾಗಿಲ್ಲದಿದ್ದಲ್ಲಿ, ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಸರ್ಕಾರದ ಮುಂದಿರುವ ಯೋಜನೆಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿನ 1995 ಕಿಮೀ. ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿರುತ್ತದೆ.

ಆ) ಪ್ಯಾಕೇಜು ನಂ.8, 38, 3, 34, 35, 13 ಮತ್ತು 2 ಗಳಿಗೆ ವಿವರವಾದ ಯೋಜನಾ ವರದಿಗಳನ್ನು ತಯಾರಿಸಲಾಗಿರುತ್ತದೆ. ಇವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಮೇಲೆ ನಮೂದಿಸಿರುವ ಪ್ಯಾಕೇಜ್‌ಗಳನ್ನು ಪೈಲಟ್ ಯೋಜನೆಗಳಾಗಿ ಪಿ.ಪಿ.ಪಿ. ಮಾದರಿಯಲ್ಲಿ ಅಭಿವೃದ್ಧಿಗೊಳಿಸಲು ಕಾಮಗಾರಿಗಳನ್ನು ಪ್ರಾರಂಭಿಸಿದ ನಂತರ, ಉಳಿದ ಪ್ಯಾಕೇಜ್‌ಗಳ ಕಾರ್ಯಸಾಧ್ಯತಾ ವರದಿಗಳನ್ನು ತಯಾರಿಸಿ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು.

642 ಶ್ರೀ ಸುಭಾಷ್ ಆರ್.ಗುತ್ತೇದಾರ್ (ಅಳಂದ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಗದಿರಿ–ರಿಪ್ಪನ್‌ಪಲ್ಲಿ ರಸ್ತೆಯು ಕರ್ನಾಟಕದಲ್ಲಿ ಇದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ರಸ್ತೆಯ ಅಭಿವೃದ್ಧಿ ಕಾಮಗಾರಿಗಾಗಿ ಟೆಂಡರ್ ಪ್ರಕ್ರಿಯೆಯು ಪ್ರಾರಂಭವಾಗಿದೆಯೇ;

ಈ) ಹಾಗಿದ್ದಲ್ಲಿ ಈ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಗುತ್ತಿಗೆದಾರರು ಯಾರು; (ಹೆಸರು ಮತ್ತು ವಿಳಾಸಗಳ ಪೂರ್ಣ ಮಾಹಿತಿಯನ್ನು ನೀಡುವುದು);

ಉ) ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದಿದ್ದಲ್ಲಿ, ಸರ್ಕಾರವೇ ಮುಂದೆ ಬಂದು ಕಾಮಗಾರಿ ಆರಂಭಿಸಲು ಆಸಕ್ತಿ ಹೊಂದಿದೆಯೇ;

ಊ) ಹಾಗಿದ್ದಲ್ಲಿ, ಪೂರ್ಣ ಮಾಹಿತಿಗಳನ್ನು ನೀಡುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇದೆ.

ಆ) ಬಿ.ಓ.ಟಿ.–ವಿ.ಜಿ.ಎಫ್. (ಶುಲ್ಕ) ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.

ಇ) ಟೆಂಡರ್ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

ಈ) ಮೆ: ಜಿ.ವಿ.ಆರ್.ಇನ್‌ಫ್ರಾ ಪ್ರಾಜೆಕ್ಟ್ಸ್ ಲಿ.
ನಂ.476, ತಲಕಾವೇರಿ ಲೇಔಟ್,
ಅಮೃತಹಳ್ಳಿ, ಬ್ಯಾಟರಾಯನಪುರ,
ನ್ಯೂ ಬೆಂಗಳೂರು ಇಂಟರ್ ನ್ಯಾಷನಲ್ ಏರ್‌ಪೋರ್ಟ್, ಬೆಂಗಳೂರು–560 092 (Lead Member)

ಉ) ಟೆಂಡರ್ ಪ್ರಕ್ರಿಯೆಯಲ್ಲಿ ಮೆ:ಜಿ.ವಿ.ಆರ್.ಇನ್‌ಫ್ರಾ ಪ್ರಾಜೆಕ್ಟ್ಸ್ ಲಿ. Consortium ಭಾಗವಹಿಸಿರುತ್ತದೆ.

ಊ) ಈ ಕಾಮಗಾರಿಯ ಒಟ್ಟು ಅಂದಾಜು ಮೊತ್ತವು 238.58 ಕೋಟಿ ರೂ.ಗಳಾಗಿರುತ್ತದೆ. ಗುತ್ತಿಗೆದಾರರ Consortium of M/s GVR Infra Projects Limited along with M/s RMN Infra Structures Limited and M/s Prathyusha Associates Shipping Pvt. Ltd. ರವರು ಈ ಕಾಮಗಾರಿಯನ್ನು ನಿರ್ವಹಿಸಲು 90.66 ಕೋಟಿ ರೂ. ಗಳ ವಿ.ಜಿ.ಎಫ್ ಅನುದಾನ (ನಿರ್ಮಾಣ ವೆಚ್ಚದ ಶೇ.38) ಕ್ಕೆ ಆರ್ಥಿಕ ಬಿಡ್‌ನ್ನು ಸಲ್ಲಿಸಿದ್ದು, ಸದರಿ ಟೆಂಡರ್ ಪ್ರಸ್ತಾವನೆಯನ್ನು ಅನುಮೋದಿಸುವ ಕುರಿತು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.